**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಾ.ಸಂ.ಪ.ಖ.01/2013-14

ದಿನಾಂಕ: 05-12-2013

**ಸುತ್ತೋಲೆ**

ವಿಷಯ: ದಿನಪತ್ರಿಕೆಗಳಿಗೆ ಸ್ಪಷ್ಟೀಕರಣ ನೀಡುವ ಕುರಿತು.
ಉಲ್ಲೇಖ: ಮಾನ್ಯ ಆಯುಕ್ತರ ಟಿಪ್ಪಣಿ ಸಂ.ಆ.ಆಶಾ.ಸಾ.ಸಂ:ಅ:
80 /2013-14 ದಿನಾಂಕ: 21-11-2013

&&&

ಸಾರ್ವಜನಿಕ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳ ಕುರಿತಂತೆ ಪ್ರತಿದಿನ ದಿನಪತ್ರಿಕೆಗಳು ಹಾಗೂ ಇತರೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆ ತುಣುಕು ಹಾಗೂ ಪತ್ರಿಕಾಖಂಡಗಳನ್ನು ಮಾನ್ಯ ಆಯುಕ್ತರ ಗಮನಕ್ಕೆ ಪ್ರತಿದಿನ ತರುತ್ತಿರುವುದು ಸರಿಯಷ್ಟೇ. ಈ ಕುರಿತಂತೆ ದಿನಾಂಕ: 21.11.2013ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಮಟ್ಟದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಈ ಕೆಳಕಂಡ ಕ್ರಮಗಳನ್ನು ವಹಿಸುವಂತೆ ಸೂಚಿಸಿದೆ.

ಜಿಲ್ಲಾಮಟ್ಟದ/ತಾಲ್ಲೂಕು ಮಟ್ಟದ ಎಲ್ಲಾ ಸ್ಥಳೀಯ ಪತ್ರಿಕೆಗಳಲ್ಲಿ ಬರುವ ಸುದ್ದಿಗಳ ತುಣುಕುಗಳನ್ನೊಳಗೊಂಡ ದೈನಂದಿನ ಪತ್ರಿಕಾ ಖಂಡಗಳನ್ನು ತಯಾರಿಸಿ ವ್ಯತಿರಿಕ್ತ ವರದಿಗಳಿಗೆ ಶೀಘ್ರವಾಗಿ ಸ್ಪಂದಿಸಿ, ಸ್ಥಳ ಪರಿಶೀಲನೆ, ಭೇಟಿ ಕೈಗೊಂಡು ಮರುದಿನ ಪತ್ರಿಕೆಯಲ್ಲಿ ವಾಸ್ತವ ಅಂಶ ಹಾಗೂ ಕೈಗೊಂಡ ಕ್ರಮದ ಬಗ್ಗೆ ಮರುಉತ್ತರ/ಸ್ಪಷ್ಟೀಕರಣವನ್ನು ಅಧಿಕೃತವಾಗಿ ನೀಡುವುದು. ಮತ್ತೊಂದು ಪ್ರತಿಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಫ್ಯಾಕ್ಸ್ ಮೂಲಕ ಕಳುಹಿಸಿ ಆಯುಕ್ತರ ಗಮನಕ್ಕೆ ತರುವುದು.

1. ಪ್ರತಿದಿನದ ಪತ್ರಿಕಾ ಖಂಡಗಳ ತುಣುಕುಗಳನ್ನು ಒಟ್ಟುಗೂಡಿಸಿ ತಿಂಗಳವಾರು ಜೋಡಿಸಿ, ದಾಖಲೆಗಾಗಿ ನಿರ್ವಹಣೆ ಮಾಡುವುದು.
2. ಇಲಾಖೆಗೆ ಸಂಬಂಧಿಸಿದಂತೆ ಮೂಡಿ ಬರುವ ಎಲ್ಲಾ ವ್ಯತಿರಿಕ್ತ ವರದಿಗಳಿಗೆ ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು ಸಂಬಂಧಪಟ್ಟ ದಿನಪತ್ರಿಕೆಗಳಿಗೆ ಸ್ಪಷ್ಟೀಕರಣ ನೀಡುವುದು.

5/12/13

ಸಹನಿರ್ದೇಶಕರು (ಶಾಲಾ ಶಿಕ್ಷಣ)

1. ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ
2. ಆಪ್ತಶಾಖೆ, ಆಯುಕ್ತರ ಕಛೇರಿ.
3. ಕಛೇರಿ ಪ್ರತಿ.

Fax NO: 080-22211086

Generated by CamScanner from intsig.com